# ವರ್ಚುವಲ್ ನಿಯೊನಾಟಲ್ ಕೇರ್

ಬೆಂಗಳೂರಿನ ಮದರ್‌ಹುಡ್ ಹಾಸ್ಪಿಟಲ್ ಭಾರತದಾದ್ಯಂತ ಮೊದಲ ವರ್ಚುವಲ್ ನಿಯೊನಾಟಲ್ ಇಂಟೆನ್ಸಿವ್ ಕೇರ್ ಯೂನಿಟ್‌ಗೆ ಚಾಲನೆ ನೀಡಿದ್ದು, ತೀವ್ರ ಅನಾರೋಗ್ಯದಿಂದ ಬಳಲುವ ನವಜಾತ ಶಿಶುಗಳಿಗೆ ತಕ್ಷಣದ ಆರೈಕೆ ಸಾಧ್ಯವಾಗಿದೆ.

ನವಜಾತ ಶಿಶುಗಳ ತೀವ್ರ ನಿಗಾ ಸೌಲಭ್ಯದಲ್ಲಿ ನಗರ ಮತ್ತು ಗ್ರಾಮೀಣ ಭಾರತದ ನಡುವಿರುವ ಅಂತರವನ್ನು ನೀಗಿಸುವ ಸೇತುವೆಯಾಗಿರುವ ಟೆಲಿ ಹೆಲ್ತ್ ಸಾವಿನ ದವಡೆಯಲ್ಲಿರುವ ಶಿಶುಗಳನ್ನು ಕಾಪಾಡಲು ಇರುವ ಏಕೈಕ ದಾರಿ ಆಗಿದೆ.

ಈಗಾಗಲೇ ಮದರ್‌ಹುಡ್ ಆಸ್ಪತ್ರೆ ಬೆಂಗಳೂರಿನಲ್ಲಿ ವರ್ಚುವಲ್ ನಿಯೊನಾಟಲ್ ಕೇರ್ ಆರಂಭಿಸಿದ್ದು, ಆಂಧ್ರಪ್ರದೇಶದ ಅನಂತಪುರ, ಹಿಂದೂಪುರ, ಮದನಪಲ್ಲಿ, ಪಟನಾ ಹಾಗೂ ಹಿಸಾರ್‌ನಲ್ಲಿ ಸಂಕಷ್ಟದಲ್ಲಿದ್ದ ನವಜಾತ ಶಿಶುಗಳನ್ನು ಆರೈಕೆ ಮಾಡಿ ಆತಂಕದಲ್ಲಿದ್ದ ಪೋಷಕರ ಮುಖದಲ್ಲಿ ಮಂದಹಾಸ ಮೂಡುವಂತೆ ಮಾಡಿದೆ.

ಈಗಾಗಲೇ ವರ್ಚುವಲ್ ಮೂಲಕವೇ ಅಪಾಯದಲ್ಲಿದ್ದ 300ಕ್ಕೂ ಹೆಚ್ಚು ನವಜಾತ ಶಿಶುಗಳಿಗೆ ಎನ್‌ಐಸಿಯು ಲೈವ್ ಮೂಲಕ ಚಿಕಿತ್ಸೆ ನೀಡಲಾಗಿದ್ದು, ಎಲ್ಲ ಶಿಶುಗಳೂ ಆರೋಗ್ಯಪೂರ್ಣವಾಗಿವೆ.

ಅತ್ಯಾಧುನಿಕ ರಿಮೋಟ್ ಮಾನಿಟರಿಂಗ್ ತಂತ್ರಜ್ಞಾನದೊಂದಿಗೆ, ಗ್ರಾಮೀಣ ಪ್ರದೇಶಗಳಲ್ಲಿ ತೀವ್ರ ಅಸ್ವಸ್ಥತೆಯಿಂದ ಬಳಲುತ್ತಿರುವ ನವಜಾತ ಶಿಶುಗಳು ಮದರ್‌ಹುಡ್‌ನ ನಿಯೋನಾಟಾಲಜಿ ಕೇರ್ ಮೂಲಕ ತಕ್ಷಣ ಆರೈಕೆ ಪಡೆಯಬಹುದು. ದಿನದ 24 ಗಂಟೆಗಳೂ ಕಾರ್ಯನಿರ್ವಹಿಸುವ ಈ ಸುಸಜ್ಜಿತ ವೈದ್ಯಕೀಯ ತಂಡ, ಪ್ರಾಣಾಪಾಯದಲ್ಲಿರುವ ಪುಟಾಣಿಗಳ ಆರೋಗ್ಯ ಸಂಜೀವಿನಿಯಾಗಿ ಕೆಲಸ ಮಾಡುತ್ತಿದೆ.

ಎನ್‌ಐಸಿಯು ಲೈವ್ ಮೂಲಕ ಮಗು ಆಸ್ಪತ್ರೆಯಲ್ಲಿ ದಾಖಲಾಗುವ ಅವಧಿ ಕಡಿಮೆಯಾಗುತ್ತದೆ. ದಾಖಲಾತಿಯಿಂದ ಡಿಸ್ಚಾರ್ಜ್‌ವರೆಗೆ ಇರುವ ಪ್ರಕ್ರಿಯೆಯನ್ನು ಈ ವ್ಯವಸ್ಥೆ ಸರಳಗೊಳಿಸುತ್ತದೆ. ಅಲ್ಲದೆ ಗ್ರಾಮೀಣ ಪ್ರದೇಶಗಳಲ್ಲಿರುವ ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರ ಕೊರತೆ ಇರುತ್ತದೆ. ಇಂಥ ಸಂದರ್ಭದಲ್ಲಿ ಎನ್‌ಐಸಿಯು ಲೈವ್ ಅತ್ಯಂತ ಪ್ರಯೋಜನಕಾರಿಯಾಗಿದೆ' ಎಂದು ಹೇಳುತ್ತಾರೆ ಮದರ್‌ಹುಡ್ ಆಸ್ಪತ್ರೆಯ ನವಜಾತ ಶಿಶುಗಳ ತಜ್ಞ ಡಾ. ಪ್ರತಾಪ್‌ಚಂದ್ರ.

ಮಗು ಜನಿಸಿದ ಮೊದಲ 28 ದಿನಗಳನ್ನು ನಿಯೊನಾಟಲ್ ದಿನಗಳೆಂದು ಕರೆಯಲಾಗುತ್ತದೆ. ಮಗುವಿನ ಆರೋಗ್ಯ ಈ ದಿನಗಳಲ್ಲಿ ಬಹಳ ಮುಖ್ಯವಾಗಿದ್ದು, ಇದು ಮಗುವಿನ ಅಸ್ತಿತ್ವದ ಪ್ರಶ್ನೆಯೂ ಹೌದು. ಭಾರತದಲ್ಲಿ ಪ್ರತಿವರ್ಷ ಸುಮಾರು 3.5 ದಶಲಕ್ಷ ಮಕ್ಕಳು ಅವಧಿಪೂರ್ವವಾಗಿ ಜನಿಸುತ್ತಿವೆ. ಗ್ರಾಮೀಣ ಭಾಗದಲ್ಲಿ ಸಮರ್ಪಕ ಚಿಕಿತ್ಸೆ ಸಿಗದೇ ಅನೇಕ ಮಕ್ಕಳು ಸಾವನ್ನಪ್ಪುವುದುಂಟು. ಅವಧಿಗೆ ಮುನ್ನ ಹೆರಿಗೆಯ ಸಂದರ್ಭದಲ್ಲೂ ಕೆಲ ಮಕ್ಕಳು ಅಸುನೀಗುತ್ತಿರುವುದು ಕೂಡ ದುರಂತ. ಇದಕ್ಕೆಲ್ಲ ಪ್ರಮುಖ ಕಾರಣವೆಂದರೆ, ಗ್ರಾಮೀಣ ಭಾಗದಲ್ಲಿ ಸರಿಯಾದ ವೈದ್ಯಕೀಯ ವ್ಯವಸ್ಥೆ ಇಲ್ಲದಿರುವುದು.



ಹುಟ್ಟುತ್ತವೆ. ಬಹುತೇಕ ಸಂದರ್ಭಗಳಲ್ಲಿ ಸಿಸೇರಿಯನ್ ಹೆರಿಗೆಯೂ ಅನಿವಾರ್ಯವಾಗುತ್ತದೆ.

ತಾಯಿಗೆ ಹೃದಯ ಸಮಸ್ಯೆ, ಸ್ಟ್ರೋಕ್, ಡಯಾಬಿಟಿಸ್ ಇದ್ದರೆ, ಗರ್ಭಕೋಶದ ಸೋಂಕು ತಗುಲಿದ್ದರೆ ಮಗು ಅವಧಿಪೂರ್ವವಾಗಿ ಜನಿಸುತ್ತದೆ. ಮಗು ಹುಟ್ಟಿದ ಮೇಲೆ ಸರಿಯಾಗಿ ಅಳದೇ ಇದ್ದರೆ, ಆನುವಂಶಿಕ ಸಮಸ್ಯೆ ಇದ್ದರೆ, ಮಗುವಿನ ಮೆದುಳಿಗೆ ಆಮ್ಲಜನಕ ಸರಿಯಾಗಿ ಸರಬರಾಜು ಆಗದೇ ಇದ್ದರೆ ನವಜಾತ ಶಿಶುವಿಗೆ ಆರೋಗ್ಯ ಸಮಸ್ಯೆ ಉಂಟಾಗುತ್ತದೆ. ಈ ಸಂದರ್ಭದಲ್ಲಿ ಮಗುವಿಗೆ ವಿಶೇಷ ಕಾಳಜಿ ಅಗತ್ಯವಿದೆ.

'ಅವಧಿಪೂರ್ವವಾಗಿ ಜನಿಸಿದ ಮಗುವಿಗೆ ತೊಂದರೆಗಳು ಹೆಚ್ಚು. ಮಗುವಿನ ಅಂಗಾಂಗಗಳು ಸರಿಯಾಗಿ ಬೆಳೆದಿರುವುದಿಲ್ಲ. ಮುಖ್ಯವಾಗಿ ಶ್ವಾಸಕೋಶದಲ್ಲಿ ಸರ್ಫ್ಯಾಕ್ಟಂಟ್ (Surfactant) ಎನ್ನುವ ಜಿಡ್ಡಿನಂತಹ ವಸ್ತು ಶ್ವಾಸಕೋಶಗಳ ಕುಗ್ಗುವಿಕೆಯನ್ನು ಸುಲಲಿತಗೊಳಿಸಿ ಸುರಕ್ಷಿತವಾದ ಉಸಿರಾಟ ಪ್ರಕ್ರಿಯೆಗೆ ಅತ್ಯಗತ್ಯವಾಗಿದೆ. ಅಕಾಲಿಕ ಹೆರಿಗೆಯಲ್ಲಿ ಈ ಸರ್ಫ್ಯಾಕ್ಟಂಟ್ ಕೊರತೆಯಾದಾಗ ಉಸಿರಾಟ ಪ್ರಕ್ರಿಯೆ ಸರಾಗವಾಗಿ ಆಗದೆ ಉಸಿರಾಟ ತೊಂದರೆಯ ಬಳಲಿಕೆಯ ಲಕ್ಷಣ (Respiratory Distress Syndrom) ಉಂಟಾಗಬಹುದು' ಎಂದು ಹೇಳುತ್ತಾರೆ ಭದ್ರಾವತಿಯಲ್ಲಿರುವ ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞೆ ಡಾ. ವೀಣಾ ಎಸ್. ಭಟ್.

'ಅವಧಿಪೂರ್ವ ಮಗುವಿಗೆ ತಕ್ಷಣದ ಹಾಗೂ ದೀರ್ಘಾವಧಿ ತೊಂದರೆ ಉಂಟಾಗಬಹುದು. ತಕ್ಷಣದ ಸಮಸ್ಯೆಗಳೆಂದರೆ ಉಸಿರಾಟದ ತೊಂದರೆ, ಮೆದುಳಿನಲ್ಲಿ ರಕ್ತಸ್ರಾವ, ಉಸಿರು ಕಟ್ಟುವುದು, ಕರುಳಿನ ಸೋಂಕು (Necrotizing Colitis) ಅಕಾಲಿಕ ಶಿಶುವಿನ ರೆಟಿನೋಪಥಿ (ROP) ಬರಬಹುದು.

ದೀರ್ಘಾವಧಿಯ ವಿಕಲತೆಗಳಾದ ಬುದ್ಧಿಮಾಂದ್ಯತೆ, ಸೆರೆಬ್ರಲ್‌ಪಾಲ್ಸಿ, ಶ್ರವಣ ಹಾಗೂ ದೃಷ್ಟಿ ದೋಷಗಳು, ನರದ ದುರ್ಬಲತೆ ಉಂಟಾಗಬಹುದು' ಎನ್ನುತ್ತಾರೆ ಅವರು.

'ತಾಯಿಯ ಗರ್ಭದಲ್ಲಿ ಎಂಟು ತಿಂಗಳವರೆಗೂ ಬೆಳೆದ ಮಗುವಿಗೆ ಹೆಚ್ಚಿನ ಸಮಸ್ಯೆ ಬರುವುದಿಲ್ಲ. ಒಂದು ವೇಳೆ ಏನಾದರೂ ಸಮಸ್ಯೆ ಕಂಡುಬಂದಲ್ಲಿ ನವಜಾತ ಶಿಶುಗಳ ತೀವ್ರನಿಗಾ ಘಟಕ (ಎನ್‌ಐಸಿಯು) ಸಹಾಯಕ್ಕೆ ಬರುತ್ತದೆ. ಆದರೆ ಇದಕ್ಕೂ ಮುನ್ನ ಹುಟ್ಟಿದ ಮಗುವಿನಲ್ಲಿ ಆರೋಗ್ಯ ಸಮಸ್ಯೆ ಕಂಡುಬರುತ್ತದೆ. ಹಲವು ಸಂದರ್ಭಗಳಲ್ಲಿ ಮಗು ಬದುಕಿ ಉಳಿಯುವ ಸಂಭವವೂ ಕಡಿಮೆ. ಬದುಕಿ ಉಳಿದರೂ ಮಗು ತೀವ್ರವಾದ ಆರೋಗ್ಯ ಸಮಸ್ಯೆ ಎದುರಿಸಬೇಕಾಗುತ್ತದೆ' ಎಂದು ವಿವರಿಸುತ್ತಾರೆ ಡಾ. ವೀಣಾ ಭಟ್.

## ಅವಧಿಪೂರ್ವ ಜನನ ಕಾರಣಗಳೇನು?

- ಆನುವಂಶಿಕ ಕಾರಣಗಳು
- ಹಿಂದಿನ ಹೆರಿಗೆಯಲ್ಲಿ ಮಗು ಅವಧಿಪೂರ್ವ ಜನಿಸಿದ್ದರೆ
- ಗರ್ಭಕೋಶದ ಸೋಂಕು, ಮೂತ್ರಕೋಶದ ಸೋಂಕು ಉಂಟಾಗಿದ್ದಲ್ಲಿ
- ಗರ್ಭಕೋಶದಲ್ಲಿ ಫೈಬ್ರಾಯ್ಡ್ ಗಳಿದ್ದರೆ
- ಗರ್ಭಾವಸ್ಥೆಯ ಆರಂಭದ ದಿನಗಳಿಂದಲೇ ರಕ್ತಸ್ರಾವವಾಗುತ್ತಿದ್ದರೆ
- ಭ್ರೂಣದ ಬೆಳವಣಿಗೆ ಕುಂಠಿತವಾಗಿದ್ದಲ್ಲಿ
- ಅವಳಿ ಅಥವಾ ತ್ರಿವಳಿ ಶಿಶುಗಳಿದ್ದಲ್ಲಿ
- ಗರ್ಭಿಣಿಯರಲ್ಲಿ ಏರುರಕ್ತದೊತ್ತಡ, ಮಧುಮೇಹ ಇದ್ದರೆ

## ಅವಧಿಪೂರ್ವ ಮಗು ಆರೈಕೆ ಹೇಗೆ?

ಸಾಮಾನ್ಯವಾಗಿ ಅವಧಿಪೂರ್ವವಾಗಿ ಹುಟ್ಟಿದ ಮಗುವಿನ ತೂಕ ಅತಿ ಕಡಿಮೆ ಇರುತ್ತದೆ. ಇಂಥ ಶಿಶುಗಳಿಗೆ ಹುಟ್ಟಿದಾಗ ಕಾಮಾಲೆ ಬರುವ ಅಪಾಯವೂ ಇರುತ್ತದೆ. ಹೀಗಾಗಿ ಅವಧಿಪೂರ್ವ ಜನಿಸಿದ ಮಕ್ಕಳನ್ನು ಬೆಚ್ಚಗಿನ ವಾತಾವರಣ ಅಥವಾ ಇನ್‌ಕ್ಯುಬೇಟರ್‌ನಲ್ಲಿ ಇಡಬೇಕಾಗುತ್ತದೆ. ಉಸಿರಾಟ ತೊಂದರೆ ಇದ್ದರೆ ಅದನ್ನು ನಿವಾರಿಸಲು ಚಿಕಿತ್ಸೆಯ ಅವಶ್ಯಕತೆಯಿದೆ. ಎನ್‌ಐಸಿಯುವಿನಲ್ಲಿ ಇಟ್ಟು ಆರೈಕೆ ಮಾಡುವ ಅಗತ್ಯವಿದೆ.